ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರ ವೆಂಕಟಸ್ವಾಮಿ ಆಯೋಗದ ವರದಿಯನ್ನು ಸಮಾಧಿ ಮಾಡಿಬಿಟ್ಟಿದೆ, ಅನಾಲೈಸ್ ಮಾಡಲಿಕ್ಕೆ ಏನೂ ಉಳಿದಿಲ್ಲ. ಈಗ ನ್ಯಾಯಾಧೀಶರಾದ ಶ್ರೀ ಚಿನ್ನಪ್ಪರೆಡ್ಡಿಯವರ ವರದಿ ಮಾತ್ರ ನಮ್ಮ ಮುಂದೆ ಇದೆ. How can I beat the dead horse?

MR. SPEAKER— Don't beat the dead horse.

ಶ್ರೀ ಎಲ್. ಆರ್. ಶಿವರಾಮೇಗೌಡ.— ವೆಂಕಟಸ್ವಾಮಿ ಆಯೋಗದ ವರದಿ ಏನಾಗಿದೆ ಎಂಬುದೂ ಎಲ್ಲರಿಗೂ ಗೊತ್ತಿದೆ, ಚಿನ್ನಪ್ಪರೆಡ್ಡಿ ಆಯೋಗದ ವರದಿಯಲ್ಲೂ ಕೂಡ ಎಷ್ಟು ಲೋಪದೋಷಗಳು ಇವೆ ಎನ್ನುವುದು ಗೊತ್ತಾಗುತ್ತಿದೆ. ಆದ್ದರಿಂದ ಇದನ್ನು ತಮ್ಮ ಮಂತ್ರಿಮಂಡಲದ ಉಪ ಸಮಿತಿಯಲ್ಲಿ ಚರ್ಚೆ ಮಾಡಿ ನಾವು ಯಾರೂ ಬೀದಿಗೆ ಇಳಿಯದಂತೆ ತಾವು ಒಂದು ಪರಿಹಾರ ಮಾಡಿ ಒಳ್ಳೆಯ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮನೋಹರ್ ಎಚ್. ತಹಶೀಲ್ದಾರ್.— ಶ್ರೀ ಚಿನ್ನಪ್ಪರೆಡ್ಡಿ ಆಯೋಗದ ವರದಿಯಲ್ಲಿ ಅನೇಕ ಲೋಪದೋಷಗಳು ಇರುವುದು ಈಗಾಗಲೆ ಕಂಡುಬಂದಿದೆ. ನೇಯ್ಗೆಯವರು ಅತ್ಯಂತ ಹಿಂದುಳಿದ ವರ್ಗದವರು ಇವರೂ ಕೂಡ ಮುಂದುವರಿದ ವರ್ಗಕ್ಕೆ ಸೇರಿದವರು ಎಂದು ವರದಿಯಲ್ಲಿದೆ. ಇದು ಸರಿಯಲ್ಲ. ಈ ವರದಿ ಈ ಸದನದಲ್ಲಿ ಪೂರ್ತಿಯಾಗಿ ಚರ್ಚೆಯಾಗಬೇಕು. ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.— ಮಾನ್ಯ ಸಭಾಧ್ಯಕ್ಷರೆ, ಈಗ ನಮಗೆಲ್ಲ ಗೊತ್ತಿರುವ ಹಾಗೆ ವೆಂಕಟಸ್ವಾಮಿ ಆಯೋಗದ ವರದಿ ಸಮಾಧಿಯಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಸಮಾಧಿಯಾಗಿರುವ ವೆಂಕಟಸ್ವಾಮಿ ಆಯೋಗದ ವರದಿಯನ್ನು ಇಟ್ಟುಕೊಂಡು ಜಸ್ಟೀಸ್ ಚಿನ್ನಪ್ಪರೆಡ್ಡಿಯವರು ಇನ್ನೊಂದು ವರದಿಯನ್ನು ತಯಾರು ಮಾಡಿದರು. ಫ್ಯಾಕ್ಟ್ಸ್, ಫಿಗರ್ಸ್, ಸೆನ್ಸಸ್ ಪ್ರಕಾರ ಯಾವುದೂ ಬೇಸ್ ಮೆಟೀರಿಯಲ್‌ನ್ನು ವೆಂಕಟಸ್ವಾಮಿ ವರದಿಯಿಂದ ತೆಗೆದುಕೊಂಡಿದ್ದಾರೆ. ಇವರು ಇಂಡಿಪೆಂಡೆಂಟ್ ಆಗಿ ಏನೂ ಸರ್ವೆ ಮಾಡಿಲ್ಲ. ಕೋಶ್ಚನೇರ್ ಹಾಕಿ ಇಡೀ ಕರ್ನಾಟಕವನ್ನೆಲ್ಲ ಸುತ್ತಿ ಫ್ಯಾಕ್ಟ್, ಫಿಗರ್ಸ್, ಅನ್ನು ಕಲೆಕ್ಟ್ ಮಾಡಿಲ್ಲ. ವೆಂಕಟಸ್ವಾಮಿ ಕಮಿಷನ್‌ನವರು ಏನು ಕೊಟ್ಟಿದ್ದರೂ ಅದನ್ನೇ ಬೇಸ್ ಮಾಡಿಕೊಂಡು ಇವರು ಫಾರ್ವರ್ಡ್, ಇವರು ಬ್ಯಾಕ್‌ವರ್ಡ್ ಎಂದು ಗ್ರೂಪ್ಸ್ ಬೇರೆ ಮಾಡಿದ್ದಾರೆ. ಅವರು ಒಂದು ರೀತಿ ಮಾಡಿದ್ದರು. ಇವರು ಒಂದು ತರಹ ಮಾಡಿಟ್ಟಿದ್ದಾರೆ. ಆದುದರಿಂದ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನೂ ಕೂಡ ಒಪ್ಪುವುದು ಬಹಳ ಕಷ್ಟವಾಗುತ್ತದೆ. ಇದರಲ್ಲಿ ಬಹಳ ಲೋಪ ದೋಷಗಳು ಇವೆ. ಇದರ ಬಗ್ಗೆ ಪೂರ್ಣವಾಗಿ ಈ ಹೌಸ್‌ನಲ್ಲಿ ಡಿಸ್‌ಕಷನ್ ಆಗಲೇಬೇಕು.

ಡಾ. ಎನ್. ಬಿ. ನಂಜಪ್ಪ.— ಜಸ್ಟೀಸ್ ಚಿನ್ನಪ್ಪರೆಡ್ಡಿಯವರ ಆಯೋಗದ ವರದಿಯಲ್ಲಿ ಅನೇಕ ಲೋಪದೋಷಗಳು ಇರುವುದರಿಂದ ಈ ಸದನದಲ್ಲಿ ಅದರ ಬಗ್ಗೆ ಚರ್ಚೆ ಮಾಡುವುದು ಅವಶ್ಯಕ. ನಾವು ಯಾವುದೇ ಕಾರಣದಿಂದ ಏನೇ ಆಗಲಿ ಸಬ್ ಕಮಿಟಿಗಾಗಲಿ ಅಥವಾ ಇಲ್ಲಿಗಾಗಲಿ ಕೊಟ್ಟರೆ ಅದನ್ನು ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ದೀರ್ಘವಾಗಿ ಚರ್ಚೆ ಮಾಡಲು ಅನುಕೂಲವಾಗುತ್ತದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಜಿಲ್ಲಾ ಪರಿಷತ್ತಿಗೆ ವಹಿಸಲಾದ ರಸ್ತೆಗಳು

೬೭೨ ಶ್ರೀ ಎಂ. ಪುಟ್ಟಸ್ವಾಮಿಗೌಡ (ಕೆ. ಆರ್. ಪೇಟೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ವಶದಲ್ಲಿದ್ದ ಎಷ್ಟು ರಸ್ತೆಗಳನ್ನು ಜಿಲ್ಲಾ ಪರಿಷತ್ತಿಗೆ ವಹಿಸಿಕೊಡಲಾಗಿದೆ (ಕಿ.ಮೀಟರ್‌ಗಳಲ್ಲಿ);

ಆ) ಯಾವ ಯಾವ ವರ್ಗಕ್ಕೆ ಸೇರಿದ ರಸ್ತೆಗಳನ್ನು ವಹಿಸಿಕೊಡಲಾಗಿದೆ (ಕಿ.ಮೀ.ಗಳಲ್ಲಿ);

ಇ) ಈ ರಸ್ತೆಗಳನ್ನು ಮತ್ತೆ ಜಿಲ್ಲಾ ಪರಿಷತ್ ವಶದಿಂದ ಹಿಂದಕ್ಕೆ ತೆಗೆದುಕೊಳ್ಳುವ ಆಲೋಚನೆ ಸರ್ಕಾರಕ್ಕೆ ಇದೆಯೇ;